## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನರಾಯಪಟ್ಟಣ

**ಸಿ.ಸಿ.ನಂ.102/2020**

**ಪಿರ್ಯಾದುದಾರರು** :– **–ವಿರುದ್ಧ –** **ಆರೋಪಿತರು** :–

ಬಿ.ಕೆ.ನಾಗರಾಜು ಲಕ್ಕೇಗೌಡ ಮತ್ತು ಇನ್ನೊಬ್ಬರು

ಹೆಸರು :

ತಂದೆಯ ಹೆಸರು :

ವಯಸ್ಸು :

ಉದ್ಯೋಗ :

ವಾಸ :

**ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ**

**ಪ್ರಶ್ನೆ 1** : ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿರಾ ?

**ಉತ್ತರ** :

**ಪ್ರಶ್ನೆ 2** : ಫ್ರಾಸಾ–1 ಬಿ.ಕೆ.ನಾಗರಾಜು ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ 16.01.2019 ರಂದು ತಾನು ಊರಿಗೆ ಬಂದಿದ್ದು ಬೆಳಿಗ್ಗೆ 11–30 ಗಂಟೆ ಸಮಯಲ್ಲಿ ಕಾಯಿ ಶೆಡ್ ನ್ನು ಮಾಡಿಸುತ್ತಿದ್ದ ಸಮಯದಲ್ಲಿ ತನ್ನ ಚಿಕ್ಕಪ್ಪನಾದ ಲಕ್ಕೇಗೌಡ ಮತ್ತು ಜಯರಾಮೇಗೌಡರು ಅಲ್ಲಿಗೆ ಬಂದಿದ್ದು, ಲಕ್ಕೇಗೌಡರು ತನ್ನ ಮೊಬೈಲ್ ನಿಂದ ವಿಡಿಯೋ ಮಾಡಿಕೊಳ್ಳುತ್ತಿದ್ದು, ತಾನು ಕೇಳಿದ್ದಕ್ಕೆ ಆಗ ಲಕ್ಕೇಗೌಡ ಬೋಳಿ ಮಗನೇ ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ತನ್ನ ಕುತ್ತಿಗೆ ಪಟ್ಟಿ ಹಿಡಿದುಕೊಂಡು ಅಲ್ಲೇ ಬಿದ್ದಂತಹ ರಾಡ್ ನಿಂದ ತನ್ನನ್ನು ಹೊಡೆಯಲು ಬಂದಿರುವುದಾಗಿ ಮತ್ತು ತನ್ನ ಕೈಯಿಂದ ಅದನ್ನು ಹಿಡಿದಿದ್ದು ನಂತರ,ಇನ್ನೊಬ್ಬ ಚಿಕ್ಕಪ್ಪ ಜಯರಾಮೇಗೌಡ ಕುಡುಗೋಲಿನಿಂದ ಹೊಡೆಯಲು ಬಂದಿದ್ದು ಅದನ್ನು ತಾನು ಹಿಡಿದುಕೊಂಡಿದ್ದು, ಲಕ್ಕೇಗೌಡರು ಸೀಮೆ ಹಂಚಿನಿಂದ ತನ್ನ ಹಣೆಯ ಮೇಲ್ಭಾಗಕ್ಕೆ ಹೊಡೆದಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

**ಉತ್ತರ** :

**ಪ್ರಶ್ನೆ 3** : ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತನ್ನ ತಂದೆ ಕಾಳೇಗೌಡರು ಜಗಳ ಬಿಡಿಸಲು ಬಂದಾಗ ಲಕ್ಕೇಗೌಡರು ಕಾಲಿನಿಂದ ತನ್ನ ಎಡಭಾಗದ ಕಿಬ್ಬೊಟ್ಟೆಗೆ ಒದ್ದು ಪೆಟ್ಟು ಮಾಡಿದ್ದು ತನ್ನ ಚಿಕ್ಕಪ್ಪ ಜಯರಾಮೇಗೌಡರು ತನ್ನ ಹಲ್ಲಿಗೆ ಗುದ್ದಿರುವುದಾಗಿ ಮತ್ತು ತನ್ನ ಮುಂಭಾಗದ ಹಲ್ಲು ಬಿದ್ದು ಹೋಗಿದ್ದು ಲಕ್ಕೇಗೌಡರು ತನ್ನ ಮಗ Army major ಇದ್ದಾನೆ ಇವನನ್ನು ಕೊಲ್ಲು ಮುಗಿಸಿಹಾಕು ಎಂದು ಜಯರಾಮೇಗೌಡರು ಕುಮ್ಮಕ್ಕು ನೀಡಿದ್ದು, ಜಗಳ ಬಿಡಿಸಲು ರಾಮಕೃಷ್ಣೇಗೌಡರು ಬಂದಿದ್ದು ತಮ್ಮನ್ನು ಅವರು ಯಾವುದೋ ಆಟೋದಲ್ಲಿ ಶ್ರವಣಬೆಳಗೊಳ ಸರ್ಕಾರಿ ಆಸ್ಪತೆಗೆ ಕರೆತಂದಿದ್ದು ಗಲಾಟೆಯಲ್ಲಿ ಜಯರಾಮೇಗೌಡ ತನ್ನ ಎದೆಗೆ ಹೊಡೆದಿದ್ದು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಪೊಲೀಸರು ತನ್ನ ಹೇಳಿಕೆ ಪಡೆದುಕೊಂಡಿರುವುದಾಗಿ ಸದರಿ ಹೇಳಿಕೆಯನ್ನು ನಿಪಿ–1 ರಂತೆ ಮತ್ತು ತನ್ನ ಸಹಿಯನ್ನು ನಿಪಿ–1(ಎ) ನಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

**ಉತ್ತರ** :

**ಪ್ರಶ್ನೆ 3** : ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾನು ನಂತರ ಠಾಣೆಗೆ ಪ್ರ ವ ವರದಿಯ ಪ್ರತಿಯನ್ನು ಕೇಳಲು ಹೋಗಿದ್ದು, ಆ ಸಮಯದಲ್ಲಿ ಎಸ್ ಹೆಚ್ ಒ ರವರು ಲಕ್ಕೇಗೌಡ ಮತ್ತು ಆತನ ಮಗನನ್ನು ಕೂರಿಸಿಕೊಂಡು ತನ್ನ ಮತ್ತು ತನ್ನ ತಂದೆಯನ್ನು ಹೀನಾಯವಾಗಿ ಅವಮಾನ ಮಾಡಿದ್ದು 18ನೇ ತಾರೀಖು ಬೆಳಿಗ್ಗೆ ತಕ್ಷೀರು ಸ್ಥಳಕ್ಕೆ ಸ್ಥಳ ಪಂಚನಾಮೆಗೆಂದು ಬಂದಿದ್ದು ಆಗ ಪಂಚನಾಮೆ ಮಾಡುವಾಗ ತಾನು, ರಾಮಕೃಷ್ಣೇಗೌಡ ಮತ್ತು ಕೃಷ್ಣೇಗೌಡ ರವರು ಸ್ಥಳದಲ್ಲಿರುವುದಾಗಿ ಮತ್ತು ಬೆಳಿಗ್ಗೆ 10 ರಿಂದ 10–30 ರವರೆಗೆ ಸ್ಥಳ ಮಹಜರ ಮಾಡಿದ್ದು, ಮಹಜರ್ ನ್ನು ನಿಪಿ–2 ರಂತೆ ಮತ್ತು ತನ್ನ ಸಹಿಯನ್ನು ನಿಪಿ–2(ಎ) ನಂತೆ ಗುರುತಿಸಿರುವುದಾಗಿ, ಸಿಟಿ ಸ್ಕ್ಯಾನ್ ರಿಪೋರ್ಟನ್ನು ನಿಪಿ–3 ಮತ್ತು ನಿಪಿ–4 ರಂತೆ, ಸಿಟಿ ಸ್ಕ್ಯಾನ್ ಪೋಟೋವನ್ನು ನಿಪಿ–6 ರಂತೆ, ಸಿ ಡಿಯನ್ನು ನಿಪಿ–6(ಎ) ನಂತೆ, ಪ್ರಿಸ್ಕ್ರಿಪ್ಷನ್ ನ್ನು ನಿಪಿ–7 ರಂತೆ, ಸಿಟಿ ಸ್ಕ್ಯಾನ್ ಬಿಲ್ಲನ್ನು ನಿಪಿ–8 ಮತ್ತು ನಿಪಿ–9 ರಂತೆ, ಪೋಟೋವನ್ನು ನಿಪಿ–10 ರಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

**ಉತ್ತರ** :

**ಪ್ರಶ್ನೆ 4** : ಫ್ರಾಸಾ–2 ರಾಮಕೃಷ್ಣೇಗೌಡ ಇವರು ತಮ್ಮ ಸಾಕ್ಷ್ಯದಲ್ಲಿ, 17.01.2019 ರಂದು ತಮ್ಮ ಮನೆಯ ಹತ್ತಿರ ನಾಗರಾಜುರವರ ಮನೆ ಇದ್ದು ನಾಗರಾಜುರವರು ಮನೆಯ

ಎದುರು ಕಾರ್ ಶೆಡ್ ಮಾಡಿದ್ದು ಕಾರ್ ಶೆಡ್ ವಿಚಾರದಲ್ಲಿ ಪಿರ್ಯಾದುದಾರರ ಮತ್ತು ಅವರ ಸಹೋದರರ ನಡುವೆ ಆಗಾಗ ಜಗಳ ಆಗುತ್ತಿದ್ದು ತಾನು ತೋಟದಿಂದ ಬರುವಾಗ ಗಲಾಟೆ ನಡೆಯುತ್ತಿದ್ದು ತಾನು ಅಲ್ಲಿಗೆ ಹೋಗಿ ನೋಡಲಾಗಿ ನಾಗರಾಜುರವರ ಬಾಯಿಂದ ಮತ್ತು ತಲೆ ಮುಂಭಾಗದಿಂದ ರಕ್ತ ಬಂದಿದ್ದು ಕಾಳೇಗೌಡರಿಗೆ ಲಕ್ಕೇಗೌಡರು ಕಾಲಿನಿಂದ ಒದ್ದಿದ್ದು ಜಗಳವನ್ನು ತಾನು ಬಿಡಿಸಿದ್ದು ತಾನು ಕಾಳೇಗೌಡ ಮತ್ತು ನಾಗರಾಜುರವರನ್ನು ಸರ್ಕಾರಿ ಆಸ್ಪತ್ರೆಗೆ ಸುಮಾರು 11 ರಿಂದ 11.30 ಸಮಯದಲ್ಲಿ ಕರೆದುಕೊಂಡು ಹೋಗಿದ್ದು ನ್ಯಾಯಾಲಯದ ಮುಂದಿರುವ 1ನೇ ಆರೋಪಿರವರು ಕಾಳೇಗೌಡರಿಗೆ ಒಡೆದಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

**ಉತ್ತರ** :

**ಪ್ರಶ್ನೆ 5** : ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ :

**ಪ್ರಶ್ನೆ 6** : ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಯನ್ನು ಹಾಜರು ಮಾಡುವಿರಾ?

ಉತ್ತರ :

**ಪ್ರಶ್ನೆ 7** : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?

ಉತ್ತರ :

ದಿನಾಂಕ 24 ನೇ ಮಾರ್ಚ್ 2026

ಆರೋಪಿ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ತಯಾರಿಸಿ ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ನಂತರ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಓ. ಹೇ. ಕೇ. ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ., ಚನ್ನರಾಯಪಟ್ಟಣ.